*ರವೀಂದ್ರನಾಥ ಶಿ. ಯಡಹಳ್ಳಿ, ಜೋಶಿಗಲ್ಲಿ*
*ನ್ಯಾಯದೇವತೆಯ ಕಣ್ಣಿಗೆ ಬಟ್ಟೆ ಕಟ್ಟಿದಂತೆ ರಾಜಕಾರಣಿಗಳ ಕಣ್ಣಿಗೆ ಕಟ್ಟಿದರೆ ಹೇಗಿರುತ್ತೆ ಶಿವಾ?*



ಛೆ! ನ್ಯಾಯದೇವತೆಯನ್ನು ರಾಜಕಾರಣಿಗೆ ಹೋಲಿಸುವುದೇ! ಇದು ಅಕ್ಷಮ್ಯ ಅಪರಾಧ!

*ಸವಿರವಿ, ಬಾಳೆಹೊನ್ನೂರು*
*ಮಧುಮೇಹವನ್ನು ಸಕ್ಕರೆ ಖಾಯಿಲೆ ಅಂತಾರೆ, ಬೆಲ್ಲದ ಖಾಯಿಲೆ ಎನ್ನುವುದಿಲ್ಲ. ಯಾಕೆ?*
ರೋಗದಲ್ಲೂ ವರ್ಣಬೇಧನೀತಿ! ಕಂದು ಬೆಲ್ಲವನ್ನು ದೂರಾಗಿಸಿ ಬಿಳಿಯ ಬಣ್ಣದ ಸಕ್ಕರೆಗೆ ಪಟ್ಟ!

*ಬಿ.ಎಂ. ಪರಶಿವಮೂರ್ತಿ, ಬೆಂಗಳೂರು*
*ನಿಮ್ಮ ಬುದ್ಧಿವಂತಿಕೆಯನ್ನು ಗಮನಿಸಿ ಯಾರಾದರೂ ಕಿಡ್ನ್ಯಾಪ್ ಮಾಡಿದರೆ ಏನ್ಮಾಡ್ತೀರಾ?*
ಯಾರಾದರೂ ಹಣವಂತರನ್ನು ಹಿಡಿಯಿರಿ. ನಮ್ಮಲ್ಲಿ ಬುದ್ಧಿವಂತರಿಗೆ ಬೆಲೆಯಿಲ್ಲ ಎಂದು ತಿಳಿಹೇಳುತ್ತೇನೆ.

*ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು*
*ಜೀವನದಲ್ಲಿ ತುಂಬಾ ಭಾರವಾದ ವಸ್ತು ಯಾವುದು?*




ಸಾಲ!

*ನ. ಮುನಿಯಪ್ಪ, ಮಳ್ಳೂರು*
*ತಾಯಿಯಿಂದಲೇ ಆಶ್ರಯ ಪಡೆದು ಬಂದವರು ತಾಯಿಯನ್ನೇ ದೂಷಿಸುತ್ತಾರಲ್ಲಾ..?*
ಕವಿ ಜರಗನಹಳ್ಳಿ ಶಿವಶಂಕರ ಹೇಳುವಂತೆ ಹತ್ತಿಯಲ್ಲಿದ್ದ ಬೀಜವೇ ಎಣ್ಣೆಯಾಗಿ ಹತ್ತಿಯನ್ನು ಸುಡುವುದು ಸಹಜ ಪ್ರವೃತ್ತಿ.

*ಪಿ. ನಾಗೇಂದ್ರಪ್ಪ, ಬೆಂಗಳೂರು*
*ಕೆಲವು ಮಹಿಳಾಮಣಿಗಳು ತಾಳಿ ಇರಲಿ, ಗಂಡ ಬೇಡ ಎನ್ನುವರಲ್ಲಾ?*
ತಾಳಿಕೊಳ್ಳುವ ಬದಲು ತಾಳಿ ಕೊಳ್ಳುವುದರಿಂದ ಗಂಡಾಂತರ ಕಡಿಮೆಯಂತೆ!

*ಪಿ. ಜಿ. ರಾಘವೇಂದ್ರ, ಮೈಸೂರು*
*ಪ್ರಕೃತಿ ವಿಕೋಪಗಳಿಗೆ ರಾಜಕಾರಣಿಗಳೇಕೆ ಬಲಿಯಾಗುವುದಿಲ್ಲ?*
ಪ್ರಾಣಿಗಳಿಗೆ ಅಪಾಯದ ವಾಸನೆ ಬೇಗ ಹತ್ತಿ ಪಾರಾಗಿಬಿಡುತ್ತವೆ.

*ಅಂಬಿಗರ ಮಂಜುನಾಥ, ಹಗರಿಬೊಮ್ಮನಹಳ್ಳಿ*
*ಈ ಜಗತ್ತಿನಲ್ಲಿ ತುಂಬಾ ಸೇಫ್ ಆದ ಜಾಗ ಯಾವುದು?*
(ಹೆಣ್ಣಲ್ಲದಿದ್ದರೆ) ತಾಯಿಯ ಗರ್ಭ!

*ಹೆಚ್. ಎಸ್. ವಿಶ್ವನಾಥ್, ಶಿವಮೊಗ್ಗ*
*ಅಧಿಕಾರಕ್ಕಾಗಿ ಏಕೆ ಕಚ್ಚಾಡಬೇಕು?*
ನಿಜ. ಗುದ್ದಾಡಲೂಬಹುದು!

*ಎಂ.ಜಿ.ನೇಹವರ್ಷಿಣಿ, ಬಳ್ಳಾರಿ*
*ಮನೆಯಲ್ಲಿ ಕತ್ತಲಾದರೆ ದೀಪ ಹಚ್ಚಬಹುದು; ಮನಸ್ಸಿನಲ್ಲಿ ಕತ್ತಲಾದರೆ?*
ಕೋಪ ಹೆಚ್ಚಬಹುದು.

*ಮಹೇಶ್ ಕೆ. ವಿಭೂತಿ, ಹರಿಹರ*
*ದೇವರು ಹೆಚ್ಚಾಗಿ ಮಾಂಸಾಹಾರಿಗಳಿಗೇ ಪ್ರತ್ಯಕ್ಷನಾಗಿದ್ದಾನೆ; ಏಕಿರಬಹುದು?*
ಅವರು ಕೊಡುವ ನಾನ್‌ವೆಜ್ ನೈವೇದ್ಯವನ್ನು ಸಹಿಸಲಾಗದೆ, ಏನೋ ವರ ಕೊಟ್ಟು ಸಾಗಿಹಾಕಲು!

*ಡಿ.ಎಲ್. ನಾಗರಾಜ್, ಚನ್ನಗಿರಿ*
*ಭಿನ್ನಮತ ನಿಗೂಢವಾಗಿಯೇ ಉಪಶಮನವಾಗಲು ಕಾರಣವೇನು?*
ಬಹಿರಂಗವಾದರೆ ಅದೇ ರೇಟ್‌ಗೆ ಮತ್ತಷ್ಟು ಭಿನ್ನಮತೀಯರು ಹುಟ್ಟುವುದರಿಂದ!

*ನರಸಿಂಹ ಎಂ. ಪೈ, ಹೊನ್ನಾವರ*
*ಮಂತ್ರಗಳೇ ಇಲ್ಲದೆ ಮದುವೆ ನಡೆಯುವುದು ಎಲ್ಲಿ?*
ಗಾಂಧರ್ವ ವಿವಾಹದಲ್ಲಿ!

*ಎಸ್.ಜಿ. ಕರನಂದಿ, ಹುನಗುಂದ*
*ಹಣ-ಹೆಂಡ-ಜಾತಿಗಳಿಂದ ದೂರವಿರುವ ಮಹಾಚುನಾವಣೆ ನಮ್ಮ ದೇಶದಲ್ಲಿ ನಡೆಯಬಹುದೆ?*
ಇಂತಹ ಕನಸುಗಳನ್ನು ಹೊರಗೆ ಹೇಳಬೇಡಿ; ಮತಿಭ್ರಮಣೆಯಾಗಿದೆ ಎಂದುಕೊಂಡಾರು!

## ಬಹುಮಾನಿತ ಪ್ರಶ್ನೆ

*ಎ.ಎಸ್. ಸ್ವಾಮಿ ಪತ್ರಿಮಠ, ಶೋರಾಪುರ*
*ರಾಜ್ಯದ ವೈಭೋಗವನ್ನು ತೊರೆದ ಸೀತೆ ಬಂಗಾರದ ಜಿಂಕೆಗೆ ಆಸೆಪಟ್ಟದ್ದೇಕೆ?*
ಅಂದು ಅಕ್ಷಯ ತದಿಗೆಯಂತೆ!

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ಹಾಸಿಗೆ ಇದ್ದಷ್ಟು ಕಾಲು ಚಾಚು; ಪಕ್ಷ ಇದ್ದಷ್ಟು?*
ಕೈ ಚಾಚು!

*ಜಿ. ಶಿವಪ್ರಸಾದ, ವಿದ್ಯಾರಣ್ಯಪುರ*
*ಬದುಕು ಮೂರಾಬಟ್ಟೆಯಾಗಿದೆ ಎಂದರೇನು?*
ನಿತ್ಯಾನಂದಸ್ವಾಮಿಯ ಸ್ಥಿತಿಯಂತಾಗಿದೆ ಎಂದು. ಪಾಪ! ತಾನು ಗಂಡಲ್ಲವೆಂದು ಘೋಷಿಸಲು ವೆಟರ್ನರಿ ವೈದ್ಯರ ಬಳಿ ಹೋಗಿದ್ದರಂತೆ!

*ಮಾಲತಿರಾಜು, ಬೆಂಗಳೂರು*
*ಗಂಡ ಸತ್ತರೆ ಹೆಂಡತಿಯ ಎಲ್ಲಾ ಸೌಲಭ್ಯಗಳನ್ನು ಕಿತ್ತುಕೊಳ್ಳುವ ಸಮಾಜ ಹೆಂಡತಿ ಸತ್ತಾಗ ಗಂಡನಿಂದ ಏನು ಕಸಿದುಕೊಳ್ಳುತ್ತದೆ?*
ಮೆಡಿಕಲ್ ಬಿಲ್ ಮತ್ತು ಶ್ರಾದ್ಧದ ಖರ್ಚನ್ನು!

*ಸಿ.ಎಸ್. ಹಿರೇಮಠ, ಹಿರೇಮುನವಳ್ಳಿ*
*ಮದ್ಯ ಕುಡಿಸಿದರೆ ಮನುಷ್ಯ ಪ್ರಾಣಿಯಾಗಿಬಿಡುತ್ತಾನೆ; ಪ್ರಾಣಿಗಳಿಗೆ ಮದ್ಯ ಕುಡಿಸಿದರೆ?*



ಅವಕ್ಕೆ ಸ್ವಾಭಿಮಾನವಿರುತ್ತದೆ, ಏನೇ ಆದರೂ ಮನುಷ್ಯರಂತೆ ಆಡುವುದಿಲ್ಲ.

*ಜೆ. ಸುಬ್ಬನಾಯಕ, ಬೊಮ್ಮಲಾಪುರ*
*ಬಟ್ಟೆಯೊಳಗೆ ಪ್ರಪಂಚದಲ್ಲಿ ಎಲ್ಲರೂ ಬೆತ್ತಲೆ; ಹೀಗಿದ್ದರೂ ಬಟ್ಟೆಯ ಅವಶ್ಯಕತೆ ಏಕೆ?*
ದುಡ್ಡು, ಮೊಬೈಲ್ ಇಟ್ಟುಕೊಳ್ಳಲು ಸ್ಥಳ ಬೇಕಲ್ಲ...!

*ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ*
*ಸಿನಿಮಾ ಮಾಡುವುದು ಪ್ರೇಕ್ಷಕರ ಮನರಂಜನೆಗಾಗಿ. ರಾಜಕೀಯ ಮಾಡುವುದು?*
ವ್ಯಂಗಚಿತ್ರಕಾರರ, ಲೇವಡಿಕಾರರ ಮನರಂಜನೆಗಾಗಿ!

■ ರಾಮ್